# ಜೋಮಾಲೆ ವೈಭವ



**ಜೋಮಾಲೆ ಹಗುರವಾದ ಗುಂಡು ಗುಂಡಾಗಿರುವ ಆಭರಣ. ಕತ್ತಿನಲ್ಲಿ ಧರಿಸಿದಾಗ ಸಖತ್ ಲುಕ್ ಕೊಡುವ ಜೋಮಾಲೆ 'ಕೊಡಗಿನ ಕೊಡುಗೆ' ಆದರೂ ಇಂದು ಎಲ್ಲ ಭಾಗದ ಮಹಿಳೆಯರು ಇಷ್ಟಪಟ್ಟು ಧರಿಸುವ ವಿಶಿಷ್ಟ ಆಭರಣಗಳಲ್ಲೊಂದು.**

**■ ಕೃಷ್ಣವೇಣಿ ಪ್ರಸಾದ್ ಮುಳಿಯ**

ಚಿತ್ರಗಳು: ಮುಳಿಯ ಕೇಶವ ಭಟ್ ಆ್ಯಂಡ್ ಸನ್ಸ್

ಆಭರಣ ಹಗುರವಾಗಿದ್ದು ದೊಡ್ಡ ದೊಡ್ಡದಾಗಿ ಕಂಡರೆ ಎಷ್ಟು ಚಂದ ಎಂದು ಬಯಸುವವರೇ ಹೆಚ್ಚು. ಬಿಸಿಲ ಧಗೆ ಏರುತ್ತಿರುವ ಇಂದಿನ ದಿನಗಳಲ್ಲಿ ಹಗುರವಾದ ಆದರೆ ಕೊರಳ ತುಂಬ ಎದ್ದು ಕಾಣುವ ಆಭರಣವನ್ನೇ ಎಲ್ಲರೂ ಇಷ್ಟಪಡುತ್ತಾರೆ. ಹಗುರವಾಗಿದ್ದು ಗುಂಡು ಗುಂಡಾಗಿರುವ ಜೋಮಾಲೆ ಕಡಿಮೆ ದರದ್ದಾಗಿದ್ದು ಅದ್ಭುತವಾದ ನೋಟ ಕೊಡುತ್ತದೆ.

ಜೋಮಾಲೆಯಲ್ಲಿ ಹಲವಾರು ವಿಧಗಳು ಇವೆ. ಮಾಲೆಯನ್ನು ಹಣೆಯುವುದರಲ್ಲಿ ಹಲವಾರು ವಿಧಗಳಿವೆ. ಗುಂಡುಗಳಲ್ಲೂ ವಿಧಗಳಿವೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ತಿಳಿಯುತ್ತದೆ.

## ಜೋಮಾಲೆ ಗುಂಡುಗಳು

ಗುಂಡಾಗಿರುವ ಗುಂಡು ನೋಡಲು ಒಂದು ಕಾಯಿಯಂತೆ, ಕೆತ್ತನೆಯನ್ನು ಹೊಂದಿದ್ದು, ಒಳಗಡೆ ವ್ಯಾಕ್ಸನ್ನು ಹೊಂದಿದ್ದು ಬಹಳ ಸುಂದರವಾಗಿರುತ್ತದೆ. ಇದರಲ್ಲಿ ಬಹಳಷ್ಟು ಗಾತ್ರ ವಿನ್ಯಾಸಗಳಿವೆ. ಅದಕ್ಕೂ ಅದರದ್ದೇ ಆದ ಸೌಂದರ್ಯವಿದೆ. 3 ಸುತ್ತು, 2 ಸುತ್ತು, ಒಂದೇ ಸುತ್ತು ಹೀಗೆ ಸುತ್ತುಗಳಿಗೆ ಹೊಂದಿಕೊಂಡು ಗುಂಡುಗಳ ಗಾತ್ರಗಳನ್ನು ಆಯ್ಕೆ ಮಾಡಬೇಕು. ಚಿಕ್ಕದಾದ ಗುಂಡುಗಳೆಂದರೆ 2, 3 ಸುತ್ತು ಇದ್ದರೂ ಬಹಳ ಅಂದವಾಗಿರುತ್ತದೆ. ದೊಡ್ಡ ಗುಂಡುಗಳಾದರೆ ಕಡಿಮೆ ಇದ್ದರೂ ನೆಕ್ಲೇಸ್‌ನಲ್ಲಿ ಎದ್ದು ಕಾಣುತ್ತದೆ. ಮಧ್ಯದಲ್ಲಿ ದೊಡ್ಡ ಗುಂಡು ಇದ್ದು ಕುತ್ತಿಗೆಯ ಹಿಂದೆ ಹೋದಂತೆ ಸೈಜ್